ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 91 ತಾಪಸ 2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:30.06.2015

## ತಿದ್ದುಪಡಿ ಆದೇಶ

ರಾಜ್ಯದ ಗ್ರಾಮ ಪಂಚಾಯಿತಿಗಳ ಪೈಕಿ ಉತ್ತಮ ಮಹತ್ಕಾರ್ಯ ಸಾಧನೆ ಮಾಡಿರುವ ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ಅಂತಹ ಗ್ರಾಮ ಪಂಚಾಯಿತಿಗಳಿಗೆ ನಗದು ಬಹುಮಾನದೊಂದಿಗೆ ಪುರಸ್ಕರಿಸಲು ರಾಜ್ಯ ಸರ್ಕಾರದ ವತಿಯಿಂದ "ಗಾಂಧಿ ಗ್ರಾಮ ಪುರಸ್ಕಾರ" ಯೋಜನೆಯನ್ನು 2014-15 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 91 ತಾಪಸ 2013, ದಿನಾಂಕ 18.06.2015 ರಲ್ಲಿ ಆದೇಶವನ್ನು ಹೊರಡಿಸಲಾಗಿದೆ. ಆದರೆ ಸದರಿ ಆದೇಶದಲ್ಲಿ ಕೆಲವು ಅಂಶಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಲಾಗಿದೆ.

1. "ತಲಾ ರೂ.5 ಲಕ್ಷಗಳ (ಎರಡು ಲಕ್ಷಗಳು ಮಾತ್ರ)" ಎನ್ನುವುದನ್ನು "ತಲಾ ರೂ.5 ಲಕ್ಷಗಳ (ಐದು ಲಕ್ಷಗಳು ಮಾತ್ರ)" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.
2. "20 ನೇ ಜೂನ್ 2015 ರಿಂದ 15 ನೇ ಜುಲೈ 2015 ರವರೆಗೆ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಲಭ್ಯಗೊಳಿಸಲಾಗುತ್ತದೆ" ಎಂಬುದನ್ನು "01 ನೇ ಜುಲೈ 2015 ರಿಂದ 15 ನೇ ಜುಲೈ 2015 ರವರೆಗೆ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಲಭ್ಯಗೊಳಿಸಲಾಗುತ್ತದೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.
3. ಅನುಬಂಧ-ಅ ರಲ್ಲಿನ ಕ್ರ.ಸಂ.(1) ರ ಮಾನದಂಡದ ಗರಿಷ್ಠ ಅಂಕಗಳನ್ನು '8' ರ ಬದಲಾಗಿ '7' ಎಂದು, ಕ್ರ.ಸಂ.(8) ರ ಮಾನದಂಡದ ಗರಿಷ್ಠ ಅಂಕಗಳನ್ನು '5' ರ ಬದಲಾಗಿ '4' ಎಂದು ತಿದ್ದಿ ಓದಿಕೊಳ್ಳತಕ್ಕದ್ದು.
4. ಅನುಬಂಧ-ಬ ರಲ್ಲಿನ ಕ್ರ.ಸಂ.(2) ರ ಮಾನದಂಡದ "ಗ್ರಾಮ ಪಂಚಾಯಿತಿಗಳ ಎಲ್ಲಾ ಆಸ್ತಿ ವಿವರಗಳನ್ನು ಆಸ್ತಿ ವಹಿಯಲ್ಲಿ ನಮೂದಿಸುವುದು ಮತ್ತು ಗ್ರಾಮ ಪಂಚಾಯಿತಿ ಕಛೇರಿ ಕಟ್ಟಡಗಳ ಮೇಲೆ ಬರೆಯಿಸುವುದು" ಎಂಬುದನ್ನು "ಗ್ರಾಮ ಪಂಚಾಯಿತಿಗಳ ಎಲ್ಲಾ ಆಸ್ತಿ ವಿವರಗಳನ್ನು ಆಸ್ತಿ ವಹಿಯಲ್ಲಿ ನಮೂದಿಸುವುದು, ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು ಮತ್ತು ಗ್ರಾಮ ಪಂಚಾಯಿತಿ ಕಛೇರಿ ಕಟ್ಟಡಗಳ ಮೇಲೆ ಬರೆಯಿಸಲಾಗಿದೆಯೇ?" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.
5. ಅನುಬಂಧ-ಬ ರಲ್ಲಿನ ಕ್ರ.ಸಂ.(9) ರ ಮಾನದಂಡದ "ವರ್ಷವೊಂದರಲ್ಲಿ ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ, ವೀಡಿಯೋ ಚಿತ್ರೀಕರಣ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು" ಎಂಬುದನ್ನು "ಗ್ರಾಮ ಪಂಚಾಯಿತಿ ನಿರ್ವಹಣಾ ಚೌಕಟ್ಟು ದಾಖಲೆಯನ್ನು (ಆರ್.ಪಿಫ್.ಡಿ.) ತಯಾರಿಸುವುದು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.
6. ಅನುಬಂಧ-ಬ ರಲ್ಲಿನ ಕ್ರ.ಸಂ.(10) ರ ಮಾನದಂಡದ "ನಡೆಸಲಾದ ಗ್ರಾಮ ಪಂಚಾಯಿತಿ ಮಾಸಿಕ ಸಭೆಗಳು ಮತ್ತು ಈ ಸಭೆಗಳ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ದಾಖಲಿಸಿ ಅಳವಡಿಸುವುದು" ಎಂಬುದನ್ನು "ಗ್ರಾಮ ಪಂಚಾಯಿತಿ ಸ್ಥಾಯಿ ಸಮಿತಿಗಳನ್ನು (ಸಾಮಾಜಿಕ ನ್ಯಾಯ ಸಮಿತಿ, ಉತ್ಪಾದನಾ ಸಮಿತಿ ಮತ್ತು ಸೌಕರ್ಯ ಸಮಿತಿ) ರಚಿಸುವುದು ಮತ್ತು ಕಾಲಕಾಲಕ್ಕೆ ಸಭೆಗಳನ್ನು ಆಯೋಜಿಸಿರುವುದು ಹಾಗೂ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು." ಎಂದು ತಿದ್ದಿ ಓದಿಕೊಳ್ಳತಕ್ಕದ್ದು.
7. ಅನುಬಂಧ-ಬ ರಲ್ಲಿನ ಕ್ರ.ಸಂ.(12) ರ ಮಾನದಂಡದ "ಮಾಸಿಕ ಬ್ಯಾಂಕ್ ಲೆಕ್ಕ ಮರುಹೊಂದಾಣಿಕೆ (ಬಿ.ಆರ್.ಎಸ್.) ವರದಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು" ಎಂಬುದನ್ನು "ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಹಾಜರಾತಿಯನ್ನು ಬಯೋಮೆಟ್ರಿಕ್ (ಇ-ಹಾಜರಾತಿ) ಪದ್ಧತಿಯಲ್ಲಿ ಕಡ್ಡಾಯವಾಗಿ ನಿರ್ವಹಿಸುತ್ತಿರುವುದು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಇನ್ನುಳಿದಂತೆ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 91 ತಾಪಸ 2013, ದಿನಾಂಕ 18.06.2015 ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲವೆಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

30/06/15

(ಸಿ.ಎಸ್.ರಾಜಶೇಖರೇಗೌಡ)
ಉಪನಿರ್ದೇಶಕರು, ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲಕರು, ಕರ್ನಾಟಕ ವೃತ್ತ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.
4. ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳು.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, , ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳು.(ಆಯಾ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಮುಖಾಂತರ)
6. ಕರ್ನಾಟಕ ವಿಕಾಸ ಮಾಸಪತ್ರಿಕೆಯಲ್ಲಿ ಪ್ರಕಟಿಸಲು.
7. ಗಣಕ ಕೋಶ-ಇಲಾಖಾ ವೆಬ್‌ಸೈಟಿನಲ್ಲಿ ಅಳವಡಿಸಲು.
8. ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿಯನ್ನು:

1. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸನ್ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯ, ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.
6. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು. ರವರಿಗೆ ನಿಗಧಿತ ಅವಧಿಯಲ್ಲಿ ಮೂರನೇ ವ್ಯಕ್ತಿಯ ತಪಾಸಣಾ ಕಾರ್ಯವನ್ನು ಮಾಡಿಕೊಡಲು ತಿಳಿಸಿದೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್., ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಎಲ್ಲಾ ಆಯುಕ್ತರು/ನಿರ್ದೇಶಕರು/ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪಂ.ರಾಜ್ ಇಲಾಖೆ.
9. ಸರ್ಕಾರದ ಅಪರ ಕಾರ್ಯದರ್ಶಿ/ಉಪಕಾರ್ಯದರ್ಶಿ(ಆಡಳಿತ), ಗ್ರಾ.ಅ.ಪಂ.ರಾಜ್ ಇಲಾಖೆ.
10. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾ.ಅ.ಪಂ.ರಾಜ್. ಇಲಾಖೆ.